**ದಿನಾಂಕಃ 10/07/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎನ್.ಕೆ ವಕೀಲರಿಂದಃ**

1. ನಾನು ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು, ಬರೆಯಲು ಗೊತ್ತು. ತಾತನ ಸ್ವತ್ತಿನಲ್ಲಿ ಭಾಗ ಬರಬೇಕೆಂದು ಈ ದಾವೆ ಹೂಡಿದ್ದೇನೆ. ನಾನು, ನನ್ನ ಅಜ್ಜಿ ಮತ್ತು ಪ್ರತಿವಾದಿಗಳು 1993 ರಿಂದ ಒಂದೇ ಮನೆಯಲ್ಲಿ ಬೇರೆಬೇರೆ ವಾಸಿಸುತ್ತಿದ್ದೇವೆ. ಈಗ ನನ್ನ ಅಜ್ಜಿ ತೀರಿಕೊಂಡಿದ್ದಾರೆ. ನಾನು ವಾಸಿಸುತ್ತಿರುವ ಮನೆಗೆ ನಾನು ವಿದ್ಯುತ್‌ಶ್ಚಕ್ತಿ ಬಿಲ್ಲನ್ನು ಕಟ್ಟುತ್ತಿದ್ದೇನೆ. ಸದರಿ ವಿದ್ಯುತ್ ಸಂಪರ್ಕವನ್ನು 2008 ರಲ್ಲಿ ನನ್ನ ತಂದೆಯ ಹೆಸರಿಗೆ ಪಡೆದಿದ್ದೇನೆ. ಪ್ರತಿವಾದಿಗಳು ಅವರು ವಾಸಿಸುತ್ತಿರುವ ಭಾಗದ ಮನೆಗೆ ವಿದ್ಯುತ್ಶಕ್ತಿ ಬಿಲ್ಲನ್ನು ಕಟ್ಟುತ್ತಿದ್ದಾರೆ. ಪ್ರತಿವಾದಿಗಳು ಎರಡೂ ಭಾಗದ ಕಂದಾಯವನ್ನು ಪಾವತಿಸುತ್ತಿದ್ದಾರೆ. ನನ್ನ ತಂದೆ ಸದರಿ ವಿದ್ಯುತ್ ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸಿದ್ದಾರೆ. ಅದರ ದಾಖಲಾತಿ ನೀಡಿದ್ದೇನೆ.

2. ಸಾಕ್ಷಿಗೆ ಸರ್ವೆ ನಂ.95/3 ನ್ನು ತೋರಿಸಿ ಇದು ನಿಮ್ಮ ಹೆಸರಿನಲ್ಲಿರುವ ಆರ್.ಟಿ.ಸಿ ಎಂದರೆ ಹೌದು ಎಂದು ನುಡಿಯುತ್ತಾರೆ. ಅದನ್ನು **ನಿಡಿ.1** ಎಂದು ಗುರುತಿಸಲಾಯಿತು. ನಿಡಿ.1 ರಲ್ಲಿರುವ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸಾಕ್ಷಿಗೆ ಒಂದು ಫೋಟೋ ತೋರಿಸಿ ಅದರಲ್ಲಿರುವ ಮನೆಯಲ್ಲಿ ವಾಸಿಸುತ್ತಿದ್ದೀರಿ ಎಂದರೆ ಹೌದು ಎಂದು ನುಡಿಯುತ್ತಾರೆ. ಅದನ್ನು **ನಿಡಿ.2** ಎಂದು ಗುರುತಿಸಲಾಯಿತು. ನಿಡಿ.2 ರಲ್ಲಿರುವ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನಿಡಿ.1 ಮತ್ತು 2 ರಲ್ಲಿರುವ ಸ್ವತ್ತುಗಳಲ್ಲಿ ಪ್ರತಿವಾದಿಗಳಿಗೆ ಭಾಗ ಕೊಡಲು ನಾನು ತಯಾರಿಲ್ಲ.

3. ಸಾಕ್ಷಿಗೆ ಇನ್ನೊಂದು ಫೋಟೋ ತೋರಿಸಿ ಲಕ್ಷ್ಮಿ ಪ್ರಿಂಟ್ ಲೈನ್ ಎಂದರೆ ನಿಮ್ಮ ಅಂಗಡಿ, ಸುಮುಖ ಜೆರಾಕ್ಸ್ ಪಾಯಿಂಟ್ ಎಂದರೆ ಪ್ರತಿವಾದಿಗಳ ಅಂಗಡಿ ಎಂದರೆ ಹೌದು ಎಂದು ನುಡಿಯುತ್ತಾರೆ. ಅದನ್ನು **ನಿಡಿ.3** ಎಂದು ಗುರುತಿಸಲಾಯಿತು. ನಿಡಿ.3 ರಲ್ಲಿ ಕಾಣಿಸುವ ಸುಮುಖ ಜೆರಾಕ್ಸ್ ಪಾಯಿಂಟ್ ಇರುವಂತಹ ಭಾಗದಲ್ಲಿ ಪ್ರತಿವಾದಿಗಳು ವಾಸಿಸುತ್ತಿದ್ದಾರೆ ಎಂದರೆ ಸರಿ. ನಿಡಿ.2 ರಲ್ಲಿ ನಾನು ವಾಸ ಮಾಡುತ್ತಿರುವ ಮನೆಗೂ

ನಿಡಿ.3 ರಲ್ಲಿ ಕಾಣಿಸುವ ಸುಮುಖ ಜೆರಾಕ್ಸ್ ಪಾಯಿಂಟ್ ಅಂಗಡಿಗೂ 500 ಮೀಟರ್ ಅಂತರ ಇದೆ. ದಾವಾಸ್ವತ್ತನ್ನು ಹೊರತುಪಡಿಸಿ ಪ್ರತಿವಾದಿಗಳಿಗೆ ಬೇರೆ ಸ್ವತ್ತು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಹೆಸರಿನಲ್ಲಿ ಇನ್ನೊಂದು ಸ್ವತ್ತು ಇಲ್ಲ, ಆದರೆ ನನ್ನ ಚಿಕ್ಕಮ್ಮನ ಹೆಸರಿನಲ್ಲಿದೆ. ಅದರ ಸಂಖ್ಯೆ ಗೊತ್ತಿಲ್ಲ.

4. ನಾನು ಆದಾಯ ತೆರಿಗೆ ಪಾವತಿಸುತ್ತಿಲ್ಲ. ಸಾಕ್ಷಿಗೆ ಡಿಮಾಂಡ್ ರಿಜಿಸ್ಟರಿನ ದೃಢೀಕೃತ ನಕಲನ್ನು ತೋರಿಸಿ ಸುಜಯ್ ಎಂದು ಇದೆ ಎಂದರೆ ಅದು ನಾನು ಕಟ್ಟಿಸಿದ ಮನೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು **ನಿಡಿ.4** ಎಂದು ಗುರುತಿಸಲಾಯಿತು. ನಾನು ಲಕ್ಷ್ಮಿ ಪ್ರಿಂಟ್ ಲೈನ್ ನಡೆಸುವುದಲ್ಲದೇ ವ್ಯವಸಾಯ ಮಾಡುತ್ತೇನೆ. ನನ್ನ ಅಂಗಡಿ ಬೆಳಿಗ್ಗೆ 9.00 ರಿಂದ ಸಂಜೆ 6.00 ಗಂಟೆಯವರೆಗೆ ತೆರೆದಿರುತ್ತದೆ. ಅಂಗಡಿಯಿಂದ ತಿಂಗಳಿಗೆ 10–15 ಸಾವಿರ ಆದಾಯ ಗಳಿಸುತ್ತೇನೆ. ಸದರಿ ಆದಾಯದಿಂದ ಬಂದಂತಹ ಹಣದಿಂದ ನಿಡಿ.2 ರಲ್ಲಿ ಕಾಣಿಸಿರುವ ಮನೆಯನ್ನು ಕಟ್ಟಿದ್ದೀರಾ ಎಂದರೆ ಇಲ್ಲವೆಂದು ನುಡಿಯುತ್ತಾರೆ. ಸದರಿ ಆದಾಯದಿಂದ ನನ್ನ ಅಜ್ಜಿಯನ್ನು ನೋಡಿಕೊಂಡಿದ್ದೇನೆ. ಅಜ್ಜಿಗೆ ಖರ್ಚು ಮಾಡಿದ ದಾಖಲಾತಿ ಇಲ್ಲ.

(ಮುಂದುವರೆದ ಪಾಟೀಸವಾಲನ್ನು ಪ್ರತಿವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚ್.ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**